ಸಂಸಾರದ ಸವಿಯನ್ನು ಉಣಿಸಿದ ಕೃಷ್ಣ ಅದೇ ತನ್ನನ್ನು ಬಹುವಾಗಿ ಪ್ರೀತಿಸುತ್ತಿದ್ದ, ಆರಾಧಿಸುತ್ತಿದ್ದ ರಾಧೆಗೆ ಕೆಲಸಕ್ಕೆ ಬಾರದ ಬರೀ ಪ್ರೇಮದ ಪಾಠ ಹೇಳಿ ಅವಳನ್ನು ಸರ್ವ ಸುಖದಿಂದಲೂ ವಂಚಿಸಿದ. ಅವನನ್ನು ನಾನು ಒಪ್ಪೊಲ್ಲ, ಅವನೊಬ್ಬ ಮೋಸಗಾರ'

'ಹಾಗಾದ್ರೆ ನೀನು ನಿನ್ನ ಅಪ್ಪನ ನಿರ್ಧಾರದಿಂದ ಹಿಂದೆ ಸರಿಯಲ್ಲ ಅನ್ನು?'

'ಖಂಡಿತಾ ಇಲ್ಲ'

'ಮತ್ತೆ ಇಷ್ಟು ದಿನ ಯಾಕೆ ಸುಮ್ಮನಿದ್ದೀಯಾ?'

'ನನ್ನ ಮನಸ್ಸಿಗೆ ಒಪ್ಪುವಂಥವರು ಇನ್ನೂ ಸಿಕ್ಕಿಲ್ಲ ಅದ್ಕೆ'

'ಓ, ಅದರಲ್ಲೂ ಸೆಲೆಕ್ಷನ್ನಾ?'

'ಬೇಡ್ವಾ ಮತ್ತೆ?'

'ನಿನ್ನ ದೃಷ್ಟೀಲಿ ಹೇಗಿರಬೇಕು?'

'ಕಟ್ಟುಮಸ್ತಾಗಿ ಆರೋಗ್ಯವಂತನಾಗಿರಬೇಕು. ಏಕೆಂದರೆ ಮಗುವೂ ಹಾಗೆಯೇ ಇರಬೇಕಲ್ಲ. ಮುಖ್ಯವಾಗಿ ಸಂವೇದನೆ ಮನಸ್ಸಾಕ್ಷಿಯೇ ಇಲ್ಲದವನಾಗಿರಬೇಕು'

ರಂಗನಾಥನಿಗೆ ಅರ್ಥವಾಗದೇ ಕೇಳಿದ...

'ಅದೇನು ಹಾಗೆ?'

'ಹ್ಞೂಂ ಮತ್ತೆ. ನಾನು ಗರ್ಭ ಧರಿಸಿದ ಮೇಲೆ ನಾನ್ಯಾರೋ ಅವನಾರೋ ಎಂಬಂತಿರಬೇಕು. ಮಗು ಹುಟ್ಟಿದ ನಂತರವೂ ನನ್ನನ್ನು ನೋಡಲು ಬರ ಬಾರದು. ಅಂಥ ಕಲ್ಲು ಮನಸ್ಸಿನವನಾಗಿರಬೇಕು. ಅಂಥವನು ಸಿಗಬೇಕು'

'ಸಿಗಲಿಲ್ಲ ಅಂದ್ರೆ'

'ನಾನು ಒಂಟಿಯಾಗಿಯೇ ಇದ್ ಬಿಡ್ತಿನಿ'

'ಅಯ್ಯೋ ತಾಯಿ ನಿನ್ನಂಥವರೂ ಈ ದೇಶದಲ್ಲಿದ್ದಾರಾ....?'

'ನಾನೇ ಇದ್ದೀನಲ್ಲ' ಎಂದು ನಕ್ಕಳು.

ಈ ಹುಚ್ಚು ಆಲೋಚನೆಯಿಂದ ಬಿಡಿಸಿ ಅವಳನ್ನೂ ಸರಿದಾರಿಗೆ ತರಬೇಕು ಎಂದು ಆಸೆಪಟ್ಟಿದ್ದ ರಂಗನಾಥನಿಗೆ ಅವಳ ಬದಲಾಗದ ಮನಸ್ಥಿತಿಯಿಂದ ತೀವ್ರ ನಿರಾಸೆಯಾಯಿತು.

*

ಭಾನುವಾರದ ದಿನ ಸಂಜೆ ತನ್ನ ಸ್ನೇಹಿತನೊಂದಿಗೆ ರಾಧಾಳ ಮನೆಗೆ ಬಂದ ರಂಗನಾಥ, 'ರಾಧಾ ಇವನು ಕೃಷ್ಣಯ್ಯಂಗಾರಿ ಅಂತ. ನನ್ನ ಬಾಲ್ಯ ಸ್ನೇಹಿತ. ರಾಜ್ಯಮಟ್ಟದ ಪತ್ರಿಕೆಗೆ ವರದಿಗಾರನಾಗಿದ್ದಾನೆ. ನಾವಿಬ್ಬರು ಪಿಕ್ಚರ್‌ಗೆ ಹೋಗ್ತಿದ್ದೀವಿ. ನೀನು ಬಾ' ಎಂದು ಕರೆದ.

'ಇಲ್ಲ ನನಗೆ ಕೆಲಸವಿದೆ' ಎಂದಳು.

'ಸರಿ ನಾವು ಬರ್ತೀವಿ'

'ಕೂತ್ಕೊಳ್ಳಿ ಕಾಫಿ ತರ್ತೀನಿ' ಎಂದಳು.

'ಬೇಡ ಲೇಟಾಗುತ್ತೆ' ಎಂದು ರಂಗನಾಥ ಬೈಕಿನಲ್ಲಿ ಅಯ್ಯಂಗಾರಿಯನ್ನು ಕೂರಿಸಿಕೊಂಡು ಹೊರಟು ಹೋದ.

ರಾತ್ರಿ ಊಟ ಮಾಡಿ ಹಾಸಿಗೆ ಮೇಲೆ ಉರುಳಿಕೊಂಡ ರಾಧಾಳ ಮನಸ್ಸಿನಲ್ಲಿ ಕೃಷ್ಣಯ್ಯಂಗಾರಿ ಸುಳಿದಾಡತೊಡಗಿದ. ಅವನ ಸುಂದರವಾದ ಮುಖ, ಆಕರ್ಷಕವಾದ ಕಣ್ಣುಗಳು, ಸುಂದರ ಅಂಗಸೌಷ್ಠವ ಅವಳ ಕಣ್ಣ ಮುಂದೆಯೇ ಬರತೊಡಗಿತು. ತನ್ನ ಮನಸ್ಸನ್ನು ತಹಬಂದಿಗೆ ತರಲು ಪ್ರಯತ್ನ ಪಡುತ್ತಲೇ ತನಗರಿವಿಲ್ಲದಂತೆ ನಿದ್ರೆಗೆ ಜಾರಿದ್ದಳು.

ಸಿನಿಮಾ ನೋಡಿ ಹೋಟೆಲ್ಲಿನಲ್ಲಿ ಊಟ ಮಾಡಲು ಕುಳಿತಾಗ ಕೃಷ್ಣಯ್ಯಂಗಾರಿಯೇ ಮಾತಿಗೆ ಶುರುವಿಟ್ಟು ಕೊಂಡ.

'ಏನ್ಲಾ ರಂಗ ಒಳ್ಳೆ ಫಿಗರ್ನ್ನೆ ಫ್ರೆಂಡ್ ಮಾಡ್ಕೊಂಡಿದ್ದೀಯಾ?'

'ಅವಳು ನಾನು ಒಂದೇ ಆಫೀಸ್ನಲ್ಲೇ ಕೆಲ್ಸ ಮಾಡ್ತಿರೋದು ಒಳ್ಳೆ ಹುಡುಗಿ. ಆದ್ರೆ ಅವಳ ಬಗ್ಗೆ ಕೇಳಿದ್ರೆ ನೀನು ಶಾಕ್ ಆಗ್ತೀಯಾ'

'ಹೌದಾ ಏನ್ ಅಂತದ್ದು?' ಕೃಷ್ಣಯ್ಯಂಗಾರಿಯ ಕುತೂಹಲದ ಪ್ರಶ್ನೆಗೆ, 'ರೂಮಿಗೆ ಹೋದಾಗ ಹೇಳ್ತಿನಿ ಬಾ' ಎಂದ.

*

ವಾರ ಉರುಳಿತು. ಭಾನುವಾರ ಸಂಜೆ ರಾಧಾಳ ಮನೆ ಹತ್ತಿರ ಬಂದಾಗ ಕೃಷ್ಣಯ್ಯಂಗಾರಿ ಮನೆ ಒಳಗಡೆಯಿಂದ ಬಂದು ಬೈಕಿನಲ್ಲಿ ಹೋಗಿದ್ದನ್ನು ನೋಡಿದಾಗ ರಂಗನಾಥನಿಗೆ ಆಶ್ಚರ್ಯವಾಗಿ 'ಇವನೇನು ಇಲ್ಲಿ' ಎಂದುಕೊಳ್ಳುತ್ತಾ ಒಳಗೆ ಹೋಗಿ ಕೇಳಿದ.

'ರಾಧಾ, ಕೃಷ್ಣಯ್ಯಂಗಾರಿ ಬಂದಿದ್ದನೇ?'

'ಹ್ಞೂ'